# 1 ನೇ ಹೆಚ್ಚುವರಿ  ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು

## ಕ್ರಿಮಿನಲ್ ಪ್ರಕರಣ ಸಂಖ್ಯೆ : 2548/2019

ಪಿರ್ಯಾದುದಾರರು : ಶ್ರೀಮತಿ ಎಂ.ಪಿ.ಪವಿತ್ರ
ಕೋಂ ಚಂದ್ರ, 34 ವರ್ಷ,
ವಾಸ : ಹಳೇ ಬಸ್ ನಿಲ್ದಾಣದ ರಸ್ತೆ,
ಮದ್ದೂರು ಟೌನ್ ಮತ್ತು ತಾಲ್ಲೂಕು, ಮಂಡ್ಯ ಜಿಲ್ಲೆ.

**ವಿರುದ್ಧ**

**ಆರೋಪಿ - : ಶ್ರೀ.ಪ್ರೇಮ್ ಜಿ.**
**ಬಿನ್ ಗೌತಮ್ ಚಂದ್ ರಾಂಕ, 30 ವರ್ಷ,**
ವಾಸ : ಪೇಟೆ ಬೀದಿ,
ಮದ್ದೂರು ಟೌನ್, ಮಂಡ್ಯ ಜಿಲ್ಲೆ.

**<u>ಆಪಾದನೆ</u>**

ಈ ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದಿಯವರಿಂದ ಕಾನೂನು ಬದ್ದ ಅವಶ್ಯಕತೆಗಾಗಿ ದಿನಾಂಕ:17.06.2019 ರಂದು ರೂ.4,20,000/- ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಹಣವನ್ನು ಮೂರು ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿದ್ದು, ನಂತರ ಸಾಲದ ಪಾವತಿಗಾಗಿ ನಿಮ್ಮ ಸಿಂಡಿಕೇಟ್ ಬ್ಯಾಂಕ್, ಮದ್ದೂರು ಶಾಖೆಯ ಚೆಕ್ ಸಂಖ್ಯೆ 603152 ಮೊತ್ತ 4,20,000/- ಹಣವನ್ನು ನಮೂದಿಸಿದ್ದು ದಿನಾಂಕ:20.09.2019 ರಂದು ಬ್ಯಾಂಕಿನಿಂದ ಪಡೆದುಕೊಳ್ಳುವಂತೆ ಪಿರ್ಯಾದಿಗೆ ನೀಡಿದ್ದು, ಸದರಿ ಚೆಕ್ ಅನ್ನು ನಗದೀಕರಿಸಲು ಪಿರ್ಯಾದಿಯು ಕಾವೇರಿ ಗ್ರಾಮೀಣ ಬ್ಯಾಂಕ್, ಮದ್ದೂರು ಶಾಖೆಗೆ ಹಾಜರು ಪಡಿಸಿದಾಗ ಸದರಿ ಬ್ಯಾಂಕ್ ನವರು " **Account closed** ” ಎಂಬ ಹಿಂಬರಹದೊಂದಿಗೆ ದಿನಾಂಕ 04.10.2019 ರಂದು ಸದರಿ ಚೆಕ್ ಅಮಾನ್ಯ ಮಾಡಿದ್ದು, ಆ ಸಂಬಂಧ

ಪಿರ್ಯಾದಿಯು ದಿನಾಂಕಃ19.10.2019 ರಂದು ನಿಮಗೆ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ಜಾರಿಯಾಗದೇ ದಿನಾಂಕಃ05.11.2019 ಹಿಂದಿರುಗಿ ಬಂದಿದ್ದು, ನೀವು ಇದುವರೆವಿಗೂ ಹಣವನ್ನು ಪಾವತಿ ಮಾಡಿರುವುದಿಲ್ಲ. ಆ ಮೂಲಕ ಲಿಖಿತ ವರ್ಗಾವಣೆಗಳ ಅಧಿನಿಯಮ ಕಲಂ-138 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುವುದಾಗಿ ನಿಮ್ಮ ವಿರುದ್ದ ಆರೋಪಿಸಲಾಗಿದೆ.

ಪ್ರಶ್ನೆ-1 ಃ ಈ ಮೇಲೆ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ ?

ಆರೋಪಿ ಉತ್ತರ ಃ

ಪ್ರಶ್ನೆ-2 ಃ ನೀವು ಆಪಾದನೆಯನ್ನು ಒಪ್ಪುಕೊಳ್ಳುತ್ತೀರಾ ಅಥವಾ ಏನಾದರೂ ಹೇಳುವುದಿದೇಯಾ?

ಆರೋಪಿ ಉತ್ತರ ಃ

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 22.08.2024 ರಂದು ಸಹಿ ಮಾಡಿರುತ್ತಾರೆ)

(ನಳಿನ ಎಸ್.ಸಿ.)
1 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿ
ಮತ್ತು ಜೆಎಂಎಫ್‌ಸಿ ನ್ಯಾಯಾಲಯ,

**ಆರೋಪಿ ಸಹಿ ಃ**